ಬರುಬರುತ್ತಾ ಶಿವುನ ಟೀಗಳು ಡಬಲ್ ಆದವು, ಟೀಗಳೊಂದಿಗೆ ಸಿಗರೇಟುಗಳೂ. ಸಿಗರೇಟು ಕೇಳಿದವನಿಗೆ ಅನಿತಾ ಕಳವಳದಿಂದ, 'ಯಾಕ್ ಬೇಕು ಸಿಗರೇಟು?' ಎಂದಾಗ ಶಿವು ಸುಮ್ಮನೆ ಅವಳ ಮುಖ ನೋಡಿದ. ಅದಕ್ಕವಳು, 'ಹುಡ್ಗೀ ನೆನಪಲ್ಲಿ ಜೀವ್ನ ಹಾಳ್ ಮಾಡ್ಕೋಬಾರ್ದು. ಹಿಂಗೆ ಸಿಗರೇಟು, ಟೀಗಳು ಜಾಸ್ತಿ ಆದ್ರೆ ಹಸ್ವೆ ದೂರ ಆಗತ್ತೆ, ಆರೋಗ್ಯ ಕೆಟ್ಹೋಗತ್ತೆ' ಎಂದಾಗ, 'ನೆನಪಾಗೋಕೆ ಹುಡ್ಗಿ ಬಿಟ್ಹೋಗಿಲ್ಲ, ಇವಾಗ ಸಿಕ್ಕಿದಾಳೆ. ಈಗ, ಇಲ್ಲೇ, ನನ್ನೆದ್ರಿಗೇ ಇದಾಳೆ' ಎಂದು ಅವಳನ್ನೇ ನೋಡಿದ. ಕೇಳಿಸಿಕೊಂಡ ಅನಿತಾ ಒಳಗೆ ಹೋದಳು. ಇವನು, 'ನಿನ್ನನ್ನ ಬಹಳ ಹೊತ್ತು ನೋಡ್ತಿರ್ಬೋದು ಅಂತಾನೇ ಸಿಗರೇಟು ಕಲ್ತಿದ್ದು' ಎಂದ. ಅವಳು ಬರಲಿಲ್ಲ. ಕಾಯುವಷ್ಟು ಕಾದು ಹೊರಟ. ಅವನು ಹೋದ ಅರಿವಾಗಿ ಹೊರಬಂದವಳಿಗೆ ಶಿವು ಬಿಟ್ಟು ಹೋದ ಟೀ ಗ್ಲಾಸಿನ ಕೆಳಗೆ ಇಪ್ಪತ್ತು ರೂಪಾಯಿ ನೋಟು ಕಂಡಿತು. ನೋಟು ಎತ್ತಿದವಳಿಗೆ ಮೊಬೈಲ್ ನಂಬರ್ ಬರೆದಿದ್ದ ಸಿಗರೇಟ್ ಪ್ಯಾಕಿನ ಸಣ್ಣ ತುಂಡು ಕಂಡಿತು.

ಶಿವುಗೆ ಏನು ಹೇಳುವುದು ಎಂಬ ಭಯದಲ್ಲೇ ಮರುದಿನ ಅಂಗಡಿಯಲ್ಲಿ ಅನಿತಾಳಿದ್ದಳು. ಶಿವು ಬರಲಿಲ್ಲ, ವಾರವಾದರೂ ಸುಳಿಯಲಿಲ್ಲ. ಅದೇ ಯೋಚನೆಯಲ್ಲಿ ಗಂಡನೊಂದಿಗೆ ವಾರ್ಡಿನಲ್ಲಿ ಇತ್ತೀಚೆಗೆ ಉದ್ಘಾಟನೆಯಾಗಿದ್ದ ಕುಡಿಯುವ ಶುದ್ಧ ನೀರಿನ ಘಟಕಕ್ಕೆ ಎರಡು ಕ್ಯಾನಿನೊಂದಿಗೆ ಬಂದಳು. ನೀರಿಗೆ ನಿಂತವರಲ್ಲಿ ಶಿವು ಮತ್ತು ಮಲ್ಲೇಶರಿದ್ದರು. ಶಿವು ಇವಳನ್ನು ನೋಡಿಯೂ ನೋಡದಂತಿದ್ದ. ಅವನು ಹಾಕಿದ ಐದು ರೂಪಾಯಿಯ ಬಂಗಾರದ ನಾಣ್ಯ ಇಪ್ಪತ್ತು ಲೀಟರ್‌ನ ಒಂದು ಕ್ಯಾನನ್ನು ತುಂಬಿಸುತ್ತಿತ್ತು. ನೀರು ತುಂಬಿಸಿಕೊಂಡವರು ಯಾವುದೋ ಬೈಕಿನಲ್ಲಿ ಹೋದರು. ಅನಿತಾಳಿಗೆ ಅವನ ಮುಖಭಾವವನ್ನು ಅರಿಯುವುದಾಗಲಿಲ್ಲ. ರಾತ್ರಿ ನಿದ್ದೆಯೂ ಹತ್ತಲಿಲ್ಲ. ಬಹಳ ಹೊತ್ತು ತನ್ನನ್ನು ನೋಡುತ್ತಿರಲೆಂದೇ ಸಿಗರೇಟು ಕಲಿತಿದ್ದಾಗಿ ಶಿವು ಹೇಳಿದ್ದು ಮನಸ್ಸನ್ನು ಕಲಕುತ್ತಲೇ ಇತ್ತು.

ಬೆಳಿಗ್ಗೆ ಶಿವು ಕ್ಲಾಸಿನಲ್ಲಿದ್ದಾಗ 'ಮನೆಗೆ ಬಾ ಮಾತಾಡ್ಬೇಕು. ಆರು ಗಂಟೆಗೆ. ಪೋಸ್ಟ್ ಆಫೀಸ್ ಎದುರಿಗಿರೋ ಹದಿನಾಲ್ಕನೇ ಮೇನ್‌ನಲ್ಲಿ. ಹೊರ್ಗಡೆ ನಿಂತಿರ್ತೀನಿ. –ಅನಿತಾ' ಎಂದು ಬಂದಿದ್ದ ಮೆಸೇಜಿನಿಂದ ಎದ್ದು ನಿಂತು 'ಯಾಕೋ ಹೊಟ್ಟೆ ನೋವು' ಎಂದು ಹೇಳಿ ರೂಮಿಗೆ ಬಂದ. ಚೆನ್ನಾಗಿ ರೆಡಿಯಾಗಿ ಆರು ಗಂಟೆಗೆ ಪೋಸ್ಟ್ ಆಫೀಸ್ ಎದುರಿಗೆ ಹದಿನಾಲ್ಕನೇ ಮುಖ್ಯರಸ್ತೆ ಬೋರ್ಡು ಕಂಡಿದ್ದೇ ಪ್ರತಿ ಮನೆಯನ್ನು ನೋಡುತ್ತಾ ನಡೆಯಲತ್ತಿದ. ಹತ್ತು ಹನ್ನೆರಡು ಮನೆಗಳಾದ ನಂತರ ಬಲಕ್ಕಿದ್ದ ಎರಡಂತಸ್ತಿನ ಬಾಲ್ಕನಿಯಲ್ಲಿ ಅನಿತಾ ಕಂಡಳು. ಇವನು ನಿಧಾನಕ್ಕೆ ಮೆಟ್ಟಿಲು ಹತ್ತಿ ಹೋದ. ಅವಳು ಇವನನ್ನು ಮನೆಯೊಳಗೆ ಬಿಟ್ಟುಕೊಂಡು ಬಾಗಿಲು ಹಾಕಿಕೊಂಡಳು. ಶಿವು ಅವಳ ಕೈ ಹಿಡಿದುಕೊಂಡ. ನಾಲ್ಕು ಕೈಗಳು ಬೆಡ್‌ರೂಮಿಗೆ ಸಾಗಿ ಬಾಗಿಲು ಹಾಕಿಕೊಂಡವು.

ಅಂದಿನಿಂದ ಆಗಾಗ ಶಿವುನ ಮೊಬೈಲು ಅನಿತಾಳ ಮನೆಗೆ ಹೋಗಲು ಹೇಳುತ್ತಿತ್ತು. ಅನಿತಾ ತಮ್ಮ ಭೇಟಿಗಳ ಸಂಖ್ಯೆಯ ಪಕ್ಕಾ ಲೆಕ್ಕವನ್ನಿಟ್ಟಿದ್ದಳು. ಅವಳ ಪ್ರಕಾರ ಸ್ವಲ್ಪ ಹೊತ್ತಿನ ಮುಂಚೆ ನಡೆದ ಇಂದಿನದ್ದು ಎಪ್ಪತ್ತಮೂರನೇ ಸಲದ್ದು. ಭೇಟಿಗಳ ನಂತರ ಇಬ್ಬರೂ ದೈಹಿಕವಾಗಿ ಉಲ್ಲಸಿತರಾಗಿರುತ್ತಿದ್ದರು. ನಾವು ದೈಹಿಕ ಆಕರ್ಷಣೆಗಳಿಗೆಲ್ಲಾ ಅವಸರದಲ್ಲಿ ಪ್ರೀತಿಪ್ರೇಮದ ಹೆಸರಿಟ್ಟು ದಡ್ಡರಾಗಿ ಬಿಡುತ್ತೇವೆ ಎಂದು ಇಬ್ಬರಿಗೂ ಅರಿವಾಯಿತು. ಅದಕ್ಕೇ ಮೊದಲ ನಾಲ್ಕಾರು ಭೇಟಿಗಳಲ್ಲಿದ್ದ ಪ್ರೀತಿಪ್ರೇಮ ಮನಸು ಭಾವನಗೆ ಎಂಬ ಮಾತುಗಳನ್ನು ಆಮೇಲೆ ಪರಸ್ಪರ ಹೇಳಿಕೊಳ್ಳಲಿಲ್ಲ.

ಭೇಟಿಗಳು ಹೆಚ್ಚಾದಂತೆ ಇವನು 'ಬರ್ತಾ ಇದೀನಿ' ಎಂದು ಮೆಸೇಜು ಹಾಕಿ ಅಂಗಡಿಗೆ ಹೋಗಲತ್ತಿದ. ಅಷ್ಟರಲ್ಲಿ ಅವಳು ಎಲ್ಲಾ ಟೀಗಳನ್ನು ಬಿಸಿ ಮಾಡಿಟ್ಟಿರುತ್ತಿದ್ದಳು. ಬಂದವನು ಬೇಕು ಅನಿಸಿದ ಟೀ ಕುಡಿಯುತ್ತಿದ್ದ. ಒಮ್ಮೆ ತನಗಾಗಿ ಇಷ್ಟು ಮಾಡುತ್ತಿದ್ದಾಳಲ್ಲಾ ಎಂಬ ಯೋಚನೆ ಬಂದು, 'ಇವಾಗ ಮಸಾಲ ಟೀ', 'ಇವಾಗ ಸಾದಾ ಟೀ' ಎಂದು ಮೆಸೇಜು ಹಾಕಲತ್ತಿದ. ಸ್ವಲ್ಪ ಹೊತ್ತಿನ ಕೆಳಗೆ ಅವಳ ಮನೆಯಿಂದ ಹೊರಡುವಾಗ 'ಲೆಮನ್ ಟೀ' ಎಂದಿದ್ದರಿಂದ ಈಗ ಅವಳು ಅದನ್ನು ತಂದಿಟ್ಟಿದ್ದಳು. ಅದಕ್ಕೇ ಅವನು ಟೀ ಯಾವುದೆಂದೂ ನೋಡದೇ ಕುಡಿದಿದ್ದು. ಶಿವು ಟೀ ಸಿಗರೇಟು ಮುಗಿಸಿ ಗೆಳೆಯನೊಂದಿಗೆ ಕ್ಲಾಸಿಗೆ ಹೋದ.

5

ಎರಡು ತಿಂಗಳಾದವು. 'ಅಮ್ಮಾ, ರಿಸಲ್ಟ್ ಬಂದ್ವು. ನಾನ್ ಎಂಟ್ನೇ ರ್‍ಯಾಂಕ್ ಬಂದೀನಿ' ಎಂದು ಖುಷಿಯಲ್ಲಿ ಹೇಳಿದ. ಅಪ್ಪ, 'ನಮಸ್ಕಾರ ಸಾಹೇಬ್ರೇ..' ಎಂದಿದ್ದು ಖುಷಿ ಹೆಚ್ಚಿಸಿತು. ಅನಿತಾಳಿಗೆ ಫೋನು ಮಾಡಿದ, 'ಪಾರ್ಟಿ ಕೊಡ್ಸಿ ಸಾರ್?' ಎಂದಳು. ಫೋನು ಮೇಲೆ ಫೋನುಗಳು ಬರಲತ್ತಿದವು. ಒಂದರ ಹಿಂದೊಂದು ಬಂದ ವಾಟ್ಸ್‌ಆ್ಯಪ್ ಶುಭಾಶಯ ಮತ್ತು ಅಭಿನಂದನೆ ಸಂದೇಶಗಳ ಸದ್ದು ರಿಂಗ್‌ಟೋನಿನಂತೆ ಕೇಳಿತು. ಮಲ್ಲೇಶ ಪರಿಚಯದವರಿಗೆಲ್ಲಾ ಗೆಳೆಯನ ಸಾಧನೆಯನ್ನು ಹೇಳಿಕೊಂಡು ಹೆಮ್ಮೆಪಟ್ಟ.

ರಾತ್ರಿ ಊಟ ಮಾಡುವಾಗ ಯಾವುದೋ ಅಪರಿಚಿತ ನಂಬರ್‌ನ ಫೋನಿಗೆ ಶಿವು, 'ಹಲೋ' ಎಂದ. ಆ ಕಡೆಯ ವ್ಯಕ್ತಿ, 'ಹಲೋ ಸಾರ್, ಶಿವಕುಮಾರ್ ಬಳ್ಳಾರಿನಾ? ಅದೇ ಕೆ.ಎ.ಎಸ್. ನಲ್ಲಿ?' ಎಂದಾಗ ಇವನು 'ಹೌದು' ಎಂದ. ಅವನು, 'ಕಂಗ್ರಾಜುಲೇಶನ್ಸ್' ಎಂದಾಗ ಇವನು, 'ಥ್ಯಾಂಕ್ಯೂ ಸರ್. ಯಾರು ಅಂತ ಗೊತ್ತಾಗ್ಲಿಲ್ಲ' ಎಂದ. 'ಸಾರ್ ನನ್ ಹೆಸ್ರು ರಾಮಚಂದ್ರ. ಚಿತ್ರದುರ್ಗದಿಂದ. ನಾನೂ ನಿಮ್ ಜನಾನೇ. ನಮ್ ಪರಿಚಯದೋರು ಒಬ್ರು ಎಂಜಿನಿಯರಿಂಗ್ ಕಾಲೇಜ್ ಪ್ರಿನ್ಸಿಪಾಲ್ ಇದಾರೆ, ಅವ್ರೂ ನಮ್ ಜನಾನೇ. ತುಂಬಾ ಅನುಕೂಲವಂತ್ರು. ಒಬ್ಳೇ ಮಗ್ಳು. ಹುಡ್ಗಿ ಹೆಸ್ರಲ್ಲಿ ದುರ್ಗಬೆಂಗ್ಳೂರು ಹೈವೇ ಪಕ್ದಲ್ಲಿರೋ ಹತ್ತ್ ಎಕ್ರೆ ಹೊಲ, ಬೆಂಗ್ಳೂರಲ್ಲಿ ಒಂದು ಥ್ರೀ ಬಿ.ಎಚ್.ಕೆ. ಫ್ಲ್ಯಾಟು, ಐವತ್ ಲಕ್ಷ ಕ್ಯಾಶ್ ಕೊಡ್ತಾರೆ. ಹೇಳ್ರೀ ಏನಂತೀರಿ?' ಎಂದು ಗ್ಯಾಪು ಕೊಡದೇ ಹೇಳಿದ. ಇವನು, 'ಸಾರ್ ಮದ್ವೆ ಬಗ್ಗೆ ನಾನಿನ್ನೂ ಯೋಚ್ನೆ ಮಾಡಿಲ್ಲ' ಎಂದ. ಆ ವ್ಯಕ್ತಿ, 'ಪರವಾಗಿಲ್ಲ ಸರ್, ಯೋಚ್ನೆ ಮಾಡಿ ಹೇಳ್ರಿ. ಇದು ನನ್ ಪರ್ಮನೆಂಟ್ ನಂಬರ್ರು' ಎಂದು ಫೋನಿಟ್ಟ. ಶಿವು ಏನಿದು? ಹೇಗಿವೆಲ್ಲಾ? ಎಂದು ಯೋಚಿಸಿದ.

ಊಟದ ನಂತರ ಇನ್ನೊಂದು ಅನ್‌ನೋನ್ ನಂಬರ್‌ನಲ್ಲಿ ಮುದುಕನೊಬ್ಬ, 'ಹಲೋ ಶಿವಕುಮಾರ್. ಐ ಯಾಮ್ ಮಹೇಂದ್ರ ಕುಮಾರ್ ಫ್ರಮ್ ಫಾರ್ಚ್ಯೂನ್ ಬಿಲ್ಡರ್ಸ್ ಅಂಡ್ ಡೆವೆಲಪರ್ಸ್. ಐ ಹ್ಯಾವ್ ಎ ಗ್ರ್ಯಾಂಡ್ ಡಾಟರ್ ನೇಮ್ಡ್ ನಿಶಾ. ಐ ವುಡ್ ಲೈಕ್ ಟು..' ಎನ್ನುತ್ತಿರುವಾಗಲೇ ಶಿವು, 'ಸಾರಿ ಸರ್, ನಾಟ್ ಇಂಟ್ರೆಸ್ಟೆಡ್' ಎಂದು ಫೋನಿಟ್ಟ. ಮುಖ ನೋಡಿದ ಮಲ್ಲೇಶನಿಗೆ 'ಸಾರ್ ಮದ್ವೆ ಆಗ್ತೀರಾ, ಸಾರ್ ಮದ್ವೆ ಆಗ್ತೀರಾ ಅಂತ ಕಸ್ಟಮರ್ ಕೇರ್ ನಂಬರುಗುಳಂಗ ಜನ ಮ್ಯಾಲಿಂದ ಮ್ಯಾಲೆ ಆಫರ್ ಕೊಡಾಕತ್ತಾರ. ಕೆ.ಎ.ಎಸ್ಸು ನನ್ನುನ್ನ ಮದ್ವೆ ಗಂಡ್ ಮಾಡ್ಬಿಟ್ತು' ಎಂದ. ಮಲ್ಲೇಶ 'ಇಂಥಾ ಎಕ್ಸಾಮ್ ರಿಸಲ್ಟುಗುಳು ವರಗಳ ಲಿಸ್ಟೂ ಆಗಿರ್ತಾವೆ, ಪರೀಕ್ಷೆ ಬರ್ದಾರಷ್ಟೇ ರಿಸಲ್ಟ್ ನೋಡಗಿಂಲ್ಲ ಅಂದಂಗಾಯ್ತು. ನಿನ್ ಟೈಮ್ ಬಂತ್ ಬಿಡಲೇ' ಎಂದು ನಕ್ಕ.

ಬೆಳಿಗ್ಗೆ ಶಿವು ಮಲ್ಲೇಶನೊಂದಿಗೆ ಬಂದು ಎರಡು ಟೀ, ಒಂದು ಸಿಗರೇಟು ಎಂದಾಗ ಸುಂದರ್ ಸಿಗರೇಟು ಕೊಟ್ಟ. ಅನಿತಾ ಬಂದು ಎರಡು ಜಿಂಜರ್ ಟೀ ಇಟ್ಟಳು. ಮಲ್ಲೇಶ ಇಬ್ಬರಿಗೂ ರ್‍ಯಾಂಕ್ ಸುದ್ದಿಯನ್ನು ಹೇಳಿದ. ಸುಂದರ್, 'ನಮ್ಮಂಡ್ಗಿ ಟೀಸಿಗರೇಟು ಅಂದ್ರೆ ಸುಮ್ನೇನಾ? ಇವಾಗ್ಲೇ ನಿಮ್ ಫೋಟೊ ಸಮೇತ ಒಂದು ಬೋರ್ಡ್ ಹಾಕ್ತೀನಿ, 'ನಮ್ಮಲ್ಲಿ ಟೀ ಮತ್ತು ಸಿಗರೇಟ್ ಸೇವಿಸಿ ಕೆ.ಎ.ಎಸ್. ಅನ್ನು ರ್‍ಯಾಂಕ್‌ನಲ್ಲಿ ಪಾಸಾಗಿ' ಅಂತ' ಎಂದು ನಕ್ಕ. ಅನಿತಾ, 'ಹಾಕ್ಲೇಬೇಕು' ಎಂದು ನಕ್ಕಳು. ನಕ್ಕವಳಿಗೆ ಯಾಕೋ ಅದು ಮನಸಾರೆ ನಕ್ಕ ನಗುವಾಗಿರಲಿಲ್ಲವೆಂದು ಅರಿವಾಯಿತು. ಮಲ್ಲೇಶ, 'ಅಷ್ಟೇ ಅಲ್ಲಣ್ಣಾ, ನಿನ್ನೆ ರಿಸಲ್ಟ್ ಬಂದ ಸ್ವಲ್ಪ ಹೊತ್ತಿಂದಾನೇ ಎಲ್ಲೆಲ್ಲಿಂದಾನೋ ಮದ್ವೆ ಆಫರ್ ಬರ್ತಿದಾವೆ' ಎಂದಿದ್ದಕ್ಕೆ ಸುಂದರ್ ಮತ್ತು ಅನಿತಾ ಒಟ್ಟಿಗೇ 'ಪಾರ್ಟಿ ಯಾವಾಗ?' ಎಂದರು. ಶಿವು, 'ನೀವೇ ಹೇಳ್ರಿ' ಎಂದ ಅಷ್ಟರಲ್ಲಿ ಗಿರಾಕಿಗಳ ದೊಡ್ಡ ಗುಂಪು ಬಂತು, ಗಂಡ ಹೆಂಡತಿ ಕೆಲಸಕ್ಕಿಳಿದರು. ಸಿಗರೇಟು ಮುಗಿಸಿದ ಶಿವು ಬಂದ ಫೋನಿಗೆ 'ಥ್ಯಾಂಕ್ಯೂ, ಥ್ಯಾಂಕ್ಯೂ' ಎನ್ನುತ್ತಾ ಮಲ್ಲೇಶನ ಜೊತೆ ಹೊರಟ. ಮಧ್ಯಾಹ್ನ ಲೈಬ್ರರಿಯಲ್ಲಿ ಪೇಪರ್ ತಿರುವಿ ಹಾಕುತ್ತಿದ್ದಾಗ ಶಿವುಗೆ ಅನಿತಾಳ ಮೆಸೇಜು ಬಂತು. ಶಿವು ಅವಳ ಮನೆಯ ದಾರಿ ಹಿಡಿದ.

6

ಎರಡು ತಿಂಗಳಲ್ಲಿ ಭೇಟಿಗಳ ಸಂಖ್ಯೆ ತೊಂಬತ್ತೆರಡಾಗಿತ್ತು. ಇಬ್ಬರೂ ಎಂದಿಗಿಂತ ಹೆಚ್ಚು ಖುಷಿಯಾಗಿ ಸುಖಿಸಿದರು. ಅಟ್ಟದ ಮೇಲಿನ ಇಲಿಗಳು ಏನನ್ನೋ ಜೋರಾಗಿ ಕೊರೆಯುತ್ತಿದ್ದ ಶಬ್ದ ಇಬ್ಬರಿಗೂ ಸುಮಧುರವಾಗಿ ಕೇಳಿಸುತ್ತಿತ್ತು. ಅವಳು ಅವನ ಎದೆಯ ರೋಮದ ಮೇಲೆ ಬೆರಳಾಡಿಸುತ್ತಾ, ಏನೋ ಬರೆದಳು. ಶಿವು, 'ಶಿವಕುಮಾರ್ ಕೆ.ಎ.ಎಸ್.' ಎಂದ. ಅವಳು 'ಕರೆಕ್ಟ್' ಎಂದು ನಕ್ಕಾಗ ಮನೆ ಬಾಗಿಲು ಬಡಿದುಕೊಂಡಿತು. ಕೆಳಗಿನ ಮನೆಯವರನ್ನು ಬೈದುಕೊಳ್ಳುತ್ತಾ ಎದ್ದು ಬಟ್ಟೆ